0202/0621

**II Semester 3 Year LL.B./VI Semester 5 Years B.A.LL.B./B.B.A.LL.B.**
**Examination, December 2016**
**COMPANY LAW**

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining questions.
2. Q. No. **9** carries **20** marks and the remaining questions carry **16** marks **each**.
3. Answers should be written **either** in English or Kannada **only**.

**ಸೂಚನೆಗಳು** : 1. ಪ್ರಶ್ನೆ **9** ಮತ್ತು ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದೇ **ಐದು** ಪ್ರಶ್ನೆಗಳನ್ನು ಉತ್ತರಿಸಿರಿ.
2. ಪ್ರಶ್ನೆ **9** ಕ್ಕೆ **20** ಅಂಕಗಳು ಹಾಗೂ ಇನ್ನುಳಿದ ಪ್ರಶ್ನೆಗಳಿಗೆ ತಲಾ **16** ಅಂಕಗಳು.
3. ಉತ್ತರಗಳನ್ನು ಆಂಗ್ಲ ಭಾಷೆಯಲ್ಲಾಗಲಿ ಅಥವಾ ಕನ್ನಡದಲ್ಲಾಗಲಿ **ಬರೆಯತಕ್ಕದ್ದು.**

Q. No. 1. Explain the circumstances in which the "Corporate Veil" of the company will be lifted by the court. Marks : 16

ನ್ಯಾಯಾಲಯದಿಂದ ಕಂಪನಿಯ ಸಂಸ್ಥಾ ಸ್ವರೂಪದ ಮುಸುಕನ್ನು ಸರಿಸಲು ನೀಡುವ ಆದೇಶಕ್ಕೆ ಇರುವ ಸಂದರ್ಭಗಳನ್ನು ವಿವರಿಸಿ.

Q. No. 2. "Company cannot be sued for pre-incorporation contracts." Discuss. Marks : 16

''ಸಂಸ್ಥಾಪನಾ ಪೂರ್ವ ಕರಾರುಗಳಿಗೆ ಕಂಪನಿಯ ವಿರುದ್ಧ ದಾವೆ ಹೂಡುವಂತಿಲ್ಲ.'' ಚರ್ಚಿಸಿರಿ.

Q. No. 3. Explain the doctrine of Indoor Management with exceptions. Marks : 16

ಒಳಾಡಳಿತ ಸಿದ್ಧಾಂತವನ್ನು ಅಪವಾದಗಳೊಂದಿಗೆ ವಿವರಿಸಿ.

Q. No. 4. Define "Prospectus". What are the remedies available for misrepresentation in the prospectus ? Explain. Marks : 16

''ಪರಿಚಯ ಪತ್ರ''ವನ್ನು ವ್ಯಾಖ್ಯಾನಿಸಿ. ಪರಿಚಯ ಪತ್ರದಲ್ಲಿನ ತಪ್ಪು ಹೇಳಿಕೆಗಳಿಗೆ ಇರುವ ಪರಿಹಾರಗಳಾವುವು ? ವಿವರಿಸಿ.

Q. No. 5. State the powers and duties of directors in the company. Marks : 16

ಕಂಪನಿಯ ನಿರ್ದೇಶಕರ ಅಧಿಕಾರ ಮತ್ತು ಕರ್ತವ್ಯಗಳನ್ನು ತಿಳಿಸಿರಿ.

Q. No. 6. Explain the different types of share capital. Marks : 16

ಶೇರು ಬಂಡವಾಳದ ವಿವಿಧ ಪ್ರಕಾರಗಳನ್ನು ವಿವರಿಸಿ.

Q. No. 7. Discuss the members' voluntary winding up of the company. Marks : 16

ಸದಸ್ಯರ ಸ್ವ-ಇಚ್ಛೆಯಿಂದ ಕಂಪನಿಯ ಸಮಾಪನೆಯ ಕುರಿತು ಚರ್ಚಿಸಿ.

Q. No. 8. Write short notes on **any two** of the following : Marks : 8×2=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

a) Doctrine of ultra vires.

ಅಧಿಕಾರಾತೀತ ಸಿದ್ಧಾಂತ.

b) Forfeiture of shares.

ಶೇರುಗಳ ಮುಟ್ಟುಗೋಲು.

c) Rule laid down in "Foss V/s Harbottle".

''ಫೋಸ್ ವಿರುದ್ಧ ಹರಬಾಟಲ್'' ಪ್ರಕರಣದಲ್ಲಿನ ನಿಯಮ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳಿಗೆ ಪರಿಹಾರ ತಿಳಿಸಿರಿ :

a) 'A' transferred certain land to 'B' on a condition that 'B' would never sell the land to coloured persons. 'B' sold the land to a company composed exclusively of Negros. 'A' took action for the annulment of the transfer on the ground that property had passed to coloured persons. Will he succeed ?

'ಅ' ತನ್ನ ಭೂಮಿಯನ್ನು ವರ್ಣೀಯ ಜನರಿಗೆ ಮಾರಬಾರದೆಂಬ ಷರತ್ತಿನೊಂದಿಗೆ 'ಬ'ನಿಗೆ ಮಾರುವನು. 'ಬ' ನು ಅದನ್ನು ನಿಗ್ರೋಗಳಿಂದಲೇ ಕೂಡಿದ ಕಂಪನಿಗೆ ಮಾರುತ್ತಾನೆ. 'ಅ' ನು ತನ್ನ ಷರತ್ತು ಉಲ್ಲಂಘನೆಯಾಗಿದೆ ಎಂಬ ಕಾರಣದ ಮೇಲೆ ಮಾರಾಟವನ್ನು ರದ್ದುಗೊಳಿಸುವಂತೆ ದಾವೆ ಹೂಡುವನು. ಅವನು ಜಯ ಗಳಿಸುವನೇ ?

b) A Company's Articles provides that a member who becomes bankrupt shall often for sale of his shares to other share holders at the price fixed by the directors. Decide the validity of the provision.

ಒಂದು ಕಂಪನಿಯ ಲಿಖಿತ ಕಟ್ಟಳೆಯು ತನ್ನ ಸದಸ್ಯರು ದಿವಾಳಿಯಾಗಿದ್ದಲ್ಲಿ ಆತನು ತನ್ನೆಲ್ಲಾ ಶೇರುಗಳನ್ನು ಇತರ ಶೇರುದಾರರಿಗೆ ಕಂಪನಿಯ ನಿರ್ದೇಶಕರು ಗೊತ್ತುಪಡಿಸಿದ ಬೆಲೆಗೆ ಮಾರಾಟ ಮಾಡಬೇಕೆಂಬ ನಿಯಮವನ್ನು ಹೊಂದಿರುತ್ತದೆ. ಈ ನಿಯಮಾವಳಿಯ ಊರ್ಜಿತತೆಯನ್ನು ನಿರ್ಧರಿಸಿ.

c) The directors of a company by two resolutions resolved to make a call. But neither resolutions have specified the date and amount of payment. Is the call valid ?

ಒಂದು ಕಂಪನಿಯ ನಿರ್ದೇಶಕರು ಶೇರುಗಳ ಮೇಲಿನ ಕಂತು ಹಣಕ್ಕಾಗಿ ಎರಡು ಗೊತ್ತುವಳಿಗಳ ಮೂಲಕ ಕರೆ ಮಾಡಿದರು, ಆದರೆ ಯಾವುದೇ ಗೊತ್ತುವಳಿಯಲ್ಲೂ ದಿನಾಂಕ ಮತ್ತು ಹಣದ ಮೊತ್ತವನ್ನು ನಮೂದಿಸಿರುವುದಿಲ್ಲ . ಈ ಕರೆಯು ಊರ್ಜಿತವೇ ?